# ಕರ್ನಾಟಕ ಸರ್ಕಾರ

**ಉತ್ತರ ಪತ್ರಿಕೆಯ ಮರುಮೌಲ್ಯಮಾಪನಕ್ಕಾಗಿ ಅರ್ಜಿ**

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು-560 003

ಏಪ್ರಿಲ್/ಜೂನ್ 20......... ರ ಎಸ್.ಎಸ್.ಎಲ್.ಸಿ. ಪರೀಕ್ಷೆ

**ನಮೂನೆ**

**1.** ಅಭ್ಯರ್ಥಿ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ :
(ಪಿನ್ ಕೋಡ್ ಕಡ್ಡಾಯ)

ದೂರವಾಣಿ ಸಂಖ್ಯೆ :
ಸ್ಥಿರ :                ಮೊಬೈಲ್: | | | | | | | | | | |

**2.** ಅಭ್ಯರ್ಥಿ ನೋಂದಣಿ ಸಂಖ್ಯೆ : | | | | | | | | | | | |

ಪರೀಕ್ಷೆ ವರ್ಷ............................ಮತ್ತು ತಿಂಗಳು......................................

**3.** ಅಭ್ಯರ್ಥಿ ಓದಿದ ಪ್ರೌಢಶಾಲೆ/
ಸಂಯುಕ್ತ ಪದವಿ ಪೂರ್ವ ಕಾಲೇಜಿನ ಹೆಸರು,
ವಿಳಾಸ:
ಶಾಲಾ ಸಂಕೇತ ಸಂಕೇತ : | | | | | | |

**4.** ಪರೀಕ್ಷಾ ಕೇಂದ್ರದ ಸಂಕೇತ : | | | | | |

**5.** ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಬಯಸುವ ವಿಷಯ/ಗಳು

| ವಿಷಯ | ವಿಷಯ ಸಂಕೇತ ಸಂಖ್ಯೆ | ಬಾಹ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು | ಮಾಧ್ಯಮ |
|---|---|---|---|
| 1. ಪ್ರಥಮ ಭಾಷೆ............................................ | | | |
| 2. ದ್ವಿತೀಯ ಭಾಷೆ.......................................... | | | |
| 3. ತೃತೀಯ ಭಾಷೆ........................................... | | | |
| 4. ಗಣಿತ | 81 | | |
| 5. ವಿಜ್ಞಾನ | 83 | | |
| 6. ಸಮಾಜ ವಿಜ್ಞಾನ | 85 | | |

**6.** ಪಾವತಿಸಿದ ಶುಲ್ಕ ಮೊತ್ತ ರೂ.......................ಅಕ್ಷರಗಳಲ್ಲಿ..............................................................................
ನಗದು/ಬ್ಯಾಂಕ್ NEFT ಚಲನ್‌ನ UTR/TSL* ಸಂಖ್ಯೆ.........................ದಿನಾಂಕ: ......................................................
ಬ್ಯಾಂಕ್ ಹೆಸರು ಮತ್ತು ಶಾಖೆ/ಬೆಂಗಳೂರು ಒನ್ ಕೇಂದ್ರ/ಕರ್ನಾಟಕ ಒನ್ ಕೇಂದ್ರ* ................................................
*ಅನ್ವಯಿಸದಿರುವ ಭಾಗವನ್ನು ಹೊಡೆದು ಹಾಕುವುದು.

ದಿನಾಂಕ:                ಅಭ್ಯರ್ಥಿ/ಪೋಷಕರ ಸಹಿ

**ವಿಶೇಷ ಸೂಚನೆ: ಅರ್ಜಿಗೆ ಸಂಬಂಧಿಸಿದ ಸೂಚನೆಗಳನ್ನು ಹಿಂಬದಿಯಲ್ಲಿ ನೀಡಲಾಗಿದೆ.**

## **ಸೂಚನೆಗಳು**

1. **ಛಾಯಾಪ್ರತಿ ಪಡೆದವರು ಮಾತ್ರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು.**
2. ಮರುಮೌಲ್ಯಮಾಪನ ಅರ್ಜಿಯು ಬಾಹ್ಯ ಪರೀಕ್ಷೆಗೆ ಮಾತ್ರ ಸೀಮಿತ, ಆಂತರಿಕ ಪರೀಕ್ಷೆಯ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರನ್ನು ಸಂಪರ್ಕಿಸುವುದು.
3. ಮರುಮೌಲ್ಯಮಾಪನಕ್ಕೆ ನಿಗದಿಗೊಳಿಸಿರುವ ಶುಲ್ಕ ಪ್ರತಿ ವಿಷಯಕ್ಕೆ ರೂ. 700/– ಗಳಾಗಿರುತ್ತದೆ.
4. ಛಾಯಾಪ್ರತಿ ಪಡೆದಂತಹ ವಿದ್ಯಾರ್ಥಿಗಳು ಛಾಯಾಪ್ರತಿ ತಲುಪಿದ 07 ದಿನಗಳೊಳಗಾಗಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು.
5. ಮರುಮೌಲ್ಯಮಾಪನ ಶುಲ್ಕವನ್ನು ನಿಗದಿತ ಬ್ಯಾಂಕ್ NEFT ಚಲನ್ ಮೂಲಕ (ಚಲನ್ ಪ್ರತಿ ಲಗತ್ತಿಸಿದೆ) ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ ಮೂಲ ಚಲನ್ ಪ್ರತಿಯನ್ನು, ಭರ್ತಿ ಮಾಡಿರುವ ಅರ್ಜಿಯೊಂದಿಗೆ ಲಗತ್ತಿಸಿ ಮಂಡಳಿ ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ ಅಂಚೆಯ ಮೂಲಕವಾಗಲಿ ಸಲ್ಲಿಸಬಹುದು, ನಗದು ರೂಪದಲ್ಲಿ ಶುಲ್ಕ ಭರಿಸುವ ಸೌಲಭ್ಯ ಮಂಡಳಿಯ ಕಚೇರಿಯಲ್ಲಿ ಲಭ್ಯವಿರುವುದಿಲ್ಲ

   **"ಸಹಾಯಕ ನಿರ್ದೇಶಕರು, 'ಯು' ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಬೆಂಗಳೂರು–560 003"**

   **ಅಥವಾ**

   ಮರುಮೌಲ್ಯಮಾಪನ ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸಲು ಬಯಸುವವರು ಖುದ್ದಾಗಿ ***ಬೆಂಗಳೂರು ಒನ್*** ಕೇಂದ್ರ ಅಥವಾ ***ಕರ್ನಾಟಕ ಒನ್*** ಕೇಂದ್ರಗಳ ಮೂಲಕ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಹಾಗೆಯೇ ಚಲನ್ ರೂಪದಲ್ಲಿ ಶುಲ್ಕ ಭರಿಸುವ ಸೌಲಭ್ಯ ***ಬೆಂಗಳೂರು ಒನ್*** ಕೇಂದ್ರ ಮತ್ತು ***ಕರ್ನಾಟಕ ಒನ್*** ಕೇಂದ್ರಗಳಲ್ಲಿ ಲಭ್ಯವಿರುವುದಿಲ್ಲ.
6. ***ಬೆಂಗಳೂರು ಒನ್*** ಕೇಂದ್ರ ಅಥವಾ ರಾಜ್ಯದ ***ಕರ್ನಾಟಕ ಒನ್*** ಕೇಂದ್ರಗಳಲ್ಲಿ ಖುದ್ದಾಗಿ ಮಾತ್ರ ಅರ್ಜಿ ಸಲ್ಲಿಸುವುದು.
7. **ಅಭ್ಯರ್ಥಿ ತನ್ನ ಹೆಸರು ಮತ್ತು ನೋಂದಣಿ ಸಂಖ್ಯೆ, ಮೊಬೈಲ್ ಸಂಖ್ಯೆ ಸಹಿತ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ಅರ್ಜಿ ಮತ್ತು ಬ್ಯಾಂಕ್ NEFT ಚಲನ್‌ನಲ್ಲಿ ನೀಡಿರುವ ನಿಗದಿತ ಅಂಕಣಗಳಲ್ಲಿ ನಮೂದಿಸಬೇಕು.**
8. ಪೋಷಕರ/ವಿದ್ಯಾರ್ಥಿ ಸಹಿ ಇಲ್ಲದಿರುವ, ಅಪೂರ್ಣ, ತಪ್ಪು ವಿವರಗಳುಳ್ಳ, ಹಾಗೂ ನಿಗದಿತ ಅಂತಿಮ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಶುಲ್ಕವನ್ನು ಮಂಡಳಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಅಂಚೆ ಮೂಲಕ ಸಲ್ಲಿಸುವ ಅರ್ಜಿಯ ಲಕೋಟೆಯ ಮೇಲೆ "................................" ವಿಷಯಗಳ ಮರು ಮೌಲ್ಯಮಾಪನಕ್ಕೆ ಅರ್ಜಿ ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸಬೇಕು.
10. **ಅನುತ್ತೀರ್ಣ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಫಲಿತಾಂಶಕ್ಕಾಗಿ ಕಾಯದೆ ಮುಂದಿನ ಪರೀಕ್ಷೆಗೆ ಶುಲ್ಕ ಪಾವತಿಸಿ ಅರ್ಜಿಯನ್ನು ಸಲ್ಲಿಸಬೇಕು. ಮುಂದಿನ ಪರೀಕ್ಷೆಗೆ ಅರ್ಜಿ ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯೇ ಜವಾಬ್ದಾರರಾಗಿರುತ್ತಾರೆ.**
11. ಪರೀಕ್ಷೆಯ ಅವ್ಯವಹಾರದಲ್ಲಿ ತೊಡಗಿದಂತಹ ಹಾಗೂ ಫಲಿತಾಂಶ ತಡೆಹಿಡಿದಿರುವಂತಹ ವಿದ್ಯಾರ್ಥಿಗಳಿಂದ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
12. ಅರ್ಜಿಯೊಂದಿಗೆ ಅಭ್ಯರ್ಥಿಯ ಪ್ರಸಕ್ತ ಸಾಲಿನ ಪರೀಕ್ಷೆ ಪ್ರವೇಶ ಪತ್ರದ ಛಾಯಾ ಪ್ರತಿಯನ್ನು ಮತ್ತು ಮಂಡಳಿಯಿಂದ ಪಡೆದ ಸಂಬಂಧಿಸಿದ ವಿಷಯದ ಉತ್ತರ ಪತ್ರಿಕೆಯ ಛಾಯಾ ಪ್ರತಿಯ ಮುಖಪುಟದ ನಕಲನ್ನು ತಪ್ಪದೇ ಲಗತ್ತಿಸಬೇಕು.
13. ಅಂಕಗಳು ಮರುಎಣಿಕೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವಂತಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
14. ಮರುಮೌಲ್ಯಮಾಪನದಲ್ಲಿ ಅಂಕಗಳು– ಪ್ರತಿ ವಿಷಯಕ್ಕೆ 6 ಅಥವಾ 6ಕ್ಕಿಂತ ಹೆಚ್ಚಾದಲ್ಲಿ ಮಾತ್ರ ಮರುಮೌಲ್ಯಮಾಪನದ ಶುಲ್ಕವನ್ನು ಹಿಂದಿರುಗಿಸಲಾಗುವುದು.
15. ಮರುಮೌಲ್ಯಮಾಪನ ಫಲಿತಾಂಶದ ನಂತರ ಮರುಪರಿಶೀಲನೆಗಾಗಲೀ ಅಥವಾ ಮೇಲ್ಮನವಿಗಾಗಲೀ ಅವಕಾಶವಿರುವುದಿಲ್ಲ.
16. **ಮರುಮೌಲ್ಯಮಾಪನದಲ್ಲಿ ಅಂಕಗಳು ಹೆಚ್ಚಾದಲ್ಲಿ ಅಂಕಗಳು ಸೇರಿಸಿ ಫಲಿತಾಂಶ ನೀಡಲಾಗುವುದು ಹಾಗೂ 06 ಮತ್ತು 06ಕ್ಕಿಂತ ಅಂಕಗಳು ಕಡಿಮೆಯಾದ ಪಕ್ಷದಲ್ಲಿ ಅಂಕಗಳನ್ನು ಕಡಿಮೆಗೊಳಿಸಿ ಫಲಿತಾಂಶ ನೀಡಲಾಗುವುದು.**
17. ಮರುಮೌಲ್ಯಮಾಪನದಲ್ಲಿ ಅಂಕಗಳು ಬದಲಾವಣೆಯಾದಲ್ಲಿ ಮೂಲ ಅಂಕಪಟ್ಟಿಯನ್ನು ಮಂಡಳಿಗೆ 15 ದಿನಗಳೊಳಗಾಗಿ ಸಲ್ಲಿಸಿ ಪರಿಷ್ಕೃತ ಅಂಕಪಟ್ಟಿಯನ್ನು ಪಡೆಯುವುದು.
18. ಛಾಯಾಪ್ರತಿ ಪಡೆದ ನಂತರ ಮುಖಪುಟದಲ್ಲಿನ ಅಂಕಗಳು ಕೂಡುವಿಕೆಯಲ್ಲಿಯೇ ತಪ್ಪಾಗಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸದೇ ಮಂಡಳಿಯನ್ನು ಸಂಪರ್ಕಿಸಿ ಕೂಡುವಿಕೆಯನ್ನು ಸರಿಪಡಿಸಿಕೊಳ್ಳಲು ಅವಕಾಶವಿದೆ.
19. ಅಂಚೆ ಮೂಲಕ ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಬಹುದು ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಒಂದೇ ಬ್ಯಾಂಕ್ NEFT ಚಲನ್‌ನಲ್ಲಿ ಆ ಎಲ್ಲಾ ವಿಷಯಗಳ ಶುಲ್ಕ ಮೊತ್ತ ಪಾವತಿಸಬಹುದು.
20. ***ಬೆಂಗಳೂರು ಒನ್*** ಕೇಂದ್ರ ಅಥವಾ ರಾಜ್ಯದ ***ಕರ್ನಾಟಕ ಒನ್*** ಕೇಂದ್ರಗಳಲ್ಲೂ ಸಹ ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಆ ಎಲ್ಲಾ ವಿಷಯಗಳ ಶುಲ್ಕ ಮೊತ್ತವನ್ನು ನಗದು ರೂಪದಲ್ಲಿ ಪಾವತಿಸಿ ಅರ್ಜಿ ಸಲ್ಲಿಸಬಹುದು.
21. ಛಾಯಾಪ್ರತಿ, ಮರುಎಣಿಕೆ, ಮರುಮೌಲ್ಯಮಾಪನ ಅರ್ಜಿ ಮತ್ತು NEFT ಚಲನ್ ನಮೂನೆ ಮಂಡಳಿಯ ಅಂತರ್ಜಾಲ ತಾಣ ವಿಳಾಸ www.kseeb.kar.nic.in ವಿಳಾಸದಲ್ಲೂ ಸಹ ಲಭ್ಯವಿರುತ್ತವೆ,

ಸಹಿ

ನಿರ್ದೇಶಕರು (ಪರೀಕ್ಷೆಗಳು)